# 2ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಓ.ಎಸ್. ನಂ.462/2017
ಪಿ.ಡಬ್ಲ್ಯೂ 01

ದಿನಾಂಕಃ 22-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದಃ**

ನಾವು ಅಣ್ಣ ತಮ್ಮ ಬೇರೆ ಬೇರೆಯಾಗಿ 10 ವರ್ಷದಿಂದ ಇದ್ದೆವೆ ಎಂದರೆ ಸರಿ. ನನ್ನ ಮತ್ತು ನಮ್ಮ ಅಣ್ಣನ ಆಧಾರ ಕಾರ್ಡ, ರೇಷನ್ ಕಾರ್ಡ ಬೇರೆ ಬೇರೆ ಇವೆ ಎಂದರೆ ಸರಿ. ನನ್ನ ಅಣ್ಣ ದಾವೆ ನಡೆಸಲು ಯಾವದೇ ಮುಕ್ತಿಯಾರ ಪತ್ರ ನೀಡಿರುವುದಿಲ್ಲ, ಮೌಖಿಕವಾಗಿ ಹೇಳಿರುತ್ತಾನೆ. ಪ್ರತಿವಾದಿಯರು ನನ್ನ ಹಿಸ್ಸೆಗೆ ಬರುವ ಆಸ್ತಿಯಲ್ಲಿ ರಸ್ತೆ ಮಾಡಿರುವುದರಿಂದ ನಾನು ಮನಾಯಿ ಕೇಳಿ ದಾವೆ ಮಾಡಿದ್ದೆನೆ. ದಿಃ 22-09-2017 ರಂದು ಪ್ರತಿವಾದಿಯರು ರಸ್ತೆ ಮಾಡುತ್ತಿದ್ದರು. ರಸ್ತೆ ಎಷ್ಟು ಅಗಲ ಇದೆ ಎಂದರೆ ಅಲ್ಲಿ ರಸ್ತೆ ಮೊದಲಿನಿಂದಲೂ ಇಲ್ಲಾ, ದಾವೆ ಮಾಡಿದ ಮೇಲೆ ರಸ್ತೆ ಬಂದ ಮಾಡಲಾಗಿದೆ. ಪಂಚಾಯತಿಯವರು ಯಾವ ಯೋಜನೆ ಅಡಿ ರಸ್ತೆ ಮಾಡಿರುತ್ತಾರೆ ಗೊತ್ತಿಲ್ಲ. ಪಂಚಾಯತಿಯವರ ವಿರುದ್ಧ ಪಿರ್ಯಾದಿ ನೀಡಿರುತ್ತೇನೆ ಆದರೆ ಅವರು ಸಿವಿಲ್ ದಾವೆ ಮಾಡಲು ಹೇಳಿದ್ದರಿಂದ ಈ ದಾವೆ ಮಾಡಿರುತ್ತೇನೆ. ಯಾವದೇ ಕೆಲಸ ಮಾಡುವಾಗ ಸರಕಾರದಿಂದ ಪಂಚಾಯತಿಯವರಿಗೆ ಹಣ ಬಿಡುಗಡೆಯಾಗುತ್ತದೆ ಎಂದರೆ ಗೊತ್ತಿಲ್ಲ. ಜಿಲ್ಲಾ ಪಂಚಾಯತಿ, ತಾಲೂಕ ಪಂಚಾಯತಿಯವರು ನನ್ನ ಜಮೀನನ್ನು ಬಂದು ನೋಡಿಕೊಂಡು ಹೋಗಿರುತ್ತಾರೆ. ದಾವೆಯಲ್ಲಿ ರಸ್ತೆ ಎಷ್ಟು ಪೂಟ ಉದ್ದ ಮತ್ತು ಅಗಲ ಮಾಡಿದ್ದಾರೆ ಅಂತಾ ಬರೆದಿಲ್ಲಾ ಎಂದರೆ ಸರಿ.

ಸಿದ್ದಪ್ಪಾ ನಿರ್ವಾಣೆಪ್ಪಾ ಜಾಬಗೌಡರ ಎನ್ನುವವರ ಮನೆ ಇದೆ ಎಂದರೆ ಸರಿ. ಸದರಿಯವರ ಮನೆಯ ಪೂರ್ವಕ್ಕೆ ನಮ್ಮ ಖುಲ್ಲಾ ಜಾಗೆ ಇದೆ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ಮನೋಹರ ಪಾಟೀಲ ಎನ್ನುವವರ ಮನೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಮನೋಹರ ಪಾಟೀಲ ರವರ ಮನೆ ದೂರ ಇದೆ ಎಂದು ನುಡಿಯುತ್ತಾರೆ. ಬ್ಲಾಕ್ ನಂ. 598 ಪಂಚಾಯತಿಗೆ ಸಂಬಂಧಿಸಿದ್ದು ಎಂದರೆ ಗೊತ್ತಿಲ್ಲ. ಬ್ಲಾಕ್ ನಂ. 598 ರ ದಕ್ಷಿಣಕ್ಕೆ ಪ್ರತಿವಾದಿಯರ ಮನೆಗೆ ಹಾಯ್ದು ಹೋಗುವ ರಸ್ತೆ ಇದೆ ಎಂದರೆ ಸರಿಯಲ್ಲ. VPC ನಂ. 457 ಪ್ರತಿವಾದಿ 1 ಮತ್ತು 2 ರವರಿಗೆ ಸಂಬಂಧಪಟ್ಟಿದೆ ಎಂದರೆ ಅದು ಯಾರಿಗೆ ಸಂಬಂಧಪಟ್ಟಿದೆ

ಗೊತ್ತಿಲ್ಲ.

ಹಾತ ನಕಾಶೆಯಲ್ಲಿ ಪ್ರತಿವಾದಿಯರ ಮನೆಯನ್ನು ತೋರಿಸಿರುವುದಿಲ್ಲ. ನಾನು ತೋರಿಸಿದ ಹಾತ ನಕಾಶೆ ಸರಿ ಇದೆ ಎಂದು ತೋರಿಸಲು ಗ್ರಾಮ ನಕ್ಷೆ ಹಾಜರುಪಡಿಸಿರುತ್ತೇನೆ. ನಿಪಿ-6 ರಿಂದ 15 ರಲ್ಲಿ ಮನೆ ನಂಬರ ಅಥವಾ ಸರ್ವೆ ನಂಬರ ತೋರಿಸಿಲ್ಲಾ ಎಂದರೆ ಅದು ನಮ್ಮ ಜಾಗೆ ಇರುತ್ತದೆ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಇರುತ್ತದೆ. ನಮ್ಮ ತಂದೆ ಹೆಸರು ಕಡಿಮೆ ಮಾಡಿ ನಮ್ಮ ಹೆಸರು ದಾಖಲಾದ ಬಗ್ಗೆ ಪಾವತಿ ಹಾಜರು ಮಾಡಿಲ್ಲಾ, ಉತಾರಗಳು ಇರುತ್ತವೆ.

1 ನೇ ಪ್ರತಿವಾದಿ ಮತ್ತು ಸಿದ್ದಪ್ಪಾ ಜಾಬಗೌಡರ ನಡುವೆ ಇದೇ ನ್ಯಾಯಾಲಯದಲ್ಲಿ ದಾರಿ ಸಲುವಾಗಿ ಅಸಲ ದಾವಾ ನಂ. 383/1997 ದಾವೆ ಇತ್ತು ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಈ ದಾವೆಯಲ್ಲಿ ಏನು ತಕರಾರು ಮಾಡಿದ್ದಾನೆ ಎಂದು ಓದಿ ನೋಡಿದ್ದಿರಿ ಎಂದರೆ ಗೊತ್ತಿಲ್ಲ. ಸದರಿ ಅಸಲ ದಾವಾ ನಂ. 383/1997 ನಿಖಾಲಿಯಾಗಿದ್ದು, ಅದರ ಮೇಲೆ ಮೇಲ್ಮನವಿ ಮಾಡಿದ ಬಗ್ಗೆ ಗೊತ್ತಿಲ್ಲ.

ಪ್ರತಿವಾದಿಯರು ದಾವಾ ಆಸ್ತಿಯ ರಸ್ತೆಯಲ್ಲಿ ಓಡಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೆಲ್ಲರಿಗೂ ಓಡಾಡಲು ಬೇರೆ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ಬೇರೆ ರಸ್ತೆ ಇರುವದನ್ನು ತೋರಿಸಲು ನಾನು ನಕ್ಷೆ ಹಾಜರು ಮಾಡಿಲ್ಲ. ರಸ್ತೆಯ ಪೂರ್ವಕ್ಕೆ ಗೋಕಾಕ-ಬೆಳಗಾವಿ PWD ರಸ್ತೆ ಬರುತ್ತದೆ ಎಂದರೆ ಸರಿ. ಬಸವಣ್ಣಿ ಪಾಟೀಲ ಮತ್ತು ಪ್ರತಿವಾದಿ ನಂ.1 ಮತ್ತು 2 ಇವರ ರಸ್ತೆ ಬ್ಲಾಕ್ ನಂ. 598 ರಲ್ಲಿ ಇದೆ ಎಂದರೆ ಗೊತ್ತಿಲ್ಲ.

ಮೊದಲಿನಿಂದಲೂ ರಸ್ತೆ ಇರುವುದರಿಂದ ಪಂಚಾಯತಿಯವರು ಅಭಿವೃದ್ದಿಪಡಿಸಿ ರಸ್ತೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ರಸ್ತೆ ಹೊರತುಪಡಿಸಿ ಪ್ರತಿವಾದಿ 1 ಮತ್ತು 2 ರವರಿಗೆ ಬೇರೆ ರಸ್ತೆ ಇಲ್ಲಾ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬೇರೆ ರಸ್ತೆ ಇರುವುದನ್ನು ನಾನು ತೋರಿಸುತ್ತೇನೆ ಎಂದು ನುಡಿಯುತ್ತಾರೆ. ದಾವೆಯಲ್ಲಿ ಬೇರೆ ರಸ್ತೆ ಇರುದನ್ನು ನಾನು ನಮೂದಿಸಿಲ್ಲಾ. 1 ಮತ್ತು 2 ನೇ ಪ್ರತಿವಾದಿಯರು ರಸ್ತೆ ವಹಿವಾಟಿನಲ್ಲಿದ್ದು, ಅವರ ವಿರುದ್ಧ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಾನು 30 ವರ್ಷ ಸೈನ್ಯದಲ್ಲಿ ಸೇವೆ ಮಾಡಿರುತ್ತೇನೆ. ನಾನು ಈಗ ಅಂಕಲಗಿ ಮತ್ತು ಸುಲಧಾಳ ಗ್ರಾಮಗಳಲ್ಲಿ ಇರುತ್ತೇನೆ. ನಮ್ಮ ಜಮೀನದ ಪೂರ್ವಕ್ಕೆ ಗೋಕಾಕ-ಬೆಳಗಾವಿ PWD ರಸ್ತೆ ಇದೆ ಎಂದರೆ ಸರಿ. ಸರಕಾರದವರು ರಸ್ತೆ ಮಾಡಲು ಜಮೀನು ಸ್ವಾಧೀನ ಮಾಡಿರುತ್ತಾರೆ ಎಂದರೆ ನಾನು ಚಿಕ್ಕವನಿದ್ದ ಕಾರಣ ಗೊತ್ತಿಲ್ಲ. ನನ್ನ ಜಮೀನದ ಉತ್ತರಕ್ಕೆ ಬ್ಲಾಕ್ 598 ಇದ್ದು

ಅಲ್ಲಿ ಪಿ.ಡಿ.ಓ ರವರು ಭೂಸ್ವಾಧೀನ ಮಾಡಿ ಜನತಾ ನಿವೇಶನ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಬ್ಲಾಕ್ 598 ಇದರ ದಕ್ಷಿಣಕ್ಕೆ ಪ್ರತಿವಾದಿ 1 ಮತ್ತು 2 ರವರ ಜಮೀನು ಇದೆ ಎಂದರೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಯರ ಮನೆ ಅವರ ಜಮೀನದಲ್ಲಿದೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯರು ಗೋಕಾಕ-ಬೆಳಗಾವಿ ಮುಖ್ಯ ರಸ್ತೆಗೆ ಬರಲು ಯಾವ ದಾರಿಯಿಂದ ಬರುತ್ತಾರೆ ಎಂದರೆ ಅಲ್ಲಿ ಒಂದೇ ರಸ್ತೆ ಇರುತ್ತದೆ, ಅವರ ವಿಷಯ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಯರ ಮನೆಯಿಂದ ಗೋಕಾಕ-ಬೆಳಗಾವಿ ರಸ್ತೆ ಎಷ್ಟು ದೂರ ಆಗುತ್ತದೆ ಎಂದರೆ ಅಳತೆ ಮಾಡಿ ನೋಡಿಲ್ಲಾ.

ಪಂಚಾಯತಿಯವರು ರಸ್ತೆ ಮಾಡುವ ಮೊದಲು, ನಾನು ಮಿಲಿಟರಿಯಲ್ಲಿ ಇದ್ದು, ನಮ್ಮ ಅಣ್ಣನಿಗೆ ನೋಟಿಸು ನೀಡಿದ್ದರು ಎಂದರೆ ಗೊತ್ತಿಲ್ಲ. ನಾನು ನಮ್ಮ ಜಮೀನದ ಮೋಜಣಿ ಮಾಡಿಸಿಲ್ಲ. ನಮ್ಮ ಜಮೀನದಲ್ಲಿ ಗೊಬ್ಬರ ಗುಂಡಿಗಳಿವೆ ಎಂದರೆ ಅಲ್ಲಿ ನಾವೇ ಗೊಬ್ಬರಗುಂಡಿ ಮಾಡಿರುತ್ತೇವೆ. ಎಷ್ಟು ಗೊಬ್ಬರಗುಂಡಿಗಳಿವೆ ಎಂದರೆ ಜಮೀನದ ತುಂಬಾ ಇವೆ. ಗೊಬ್ಬರಗುಂಡಿಯಲ್ಲಿ ಕಸ ಚೆಲ್ಲಲು ಯಾವ ರಸ್ತೆಯಿಂದ ಹೋಗುತ್ತಾರೆ ಗೊತ್ತಿಲ್ಲ.

ಟ್ರ್ಯಾಕ್ಟರ ಮತ್ತು ಟ್ರಕ ಹಾಯ್ದು ಹೋಗಲು ಎಷ್ಟು ಅಗಲ ರಸ್ತೆ ಬೇಕು ಎಂದರೆ ನಾನು ಅದರ ಬಗ್ಗೆ ತರಬೇತಿ ಪಡೆದಿಲ್ಲಾ. 1 ಮತ್ತು 2 ನೇ ಪ್ರತಿವಾದಿಯರ ಜಮೀನಿನ ಸರ್ವೆ ನಂಬರ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಯರು ನಮ್ಮ ಖಾಸ ಅಣ್ಣತಮ್ಮಂದಿರು ಎಂದರೆ ಗೊತ್ತಿಲ್ಲ. ನನ್ನ ಮತ್ತು ನನ್ನ ಅಣ್ಣನ ನಡುವೆ ಆದ ವಾಟ್ನಿ ಪತ್ರವನ್ನು ನಾನು ಕೊಟ್ಟಿಲ್ಲ. ಸಾಕ್ಷಿ ಮುಂದುವರೆದು ಬೇರೆ ಬೇರೆ ಉತಾರಗಳಿದ್ದು, ಅವುಗಳನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಬೇಕಾಯ್ದೆಶೀರ ರೀತಿಯಿಂದ ರಸ್ತೆ ಮಾಡುತ್ತಿದ್ದಾರೆ ಅಂತಾ ನನ್ನ ಬಾಯಿ ಹೇಳಿಕೆ ಬಿಟ್ಟರೇ ಬೇರೆ ದಾಖಲೆಗಳು ಇಲ್ಲಾ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮೊದಲಿನಿಂದಲೂ ರಸ್ತೆ ಇರುವುದರಿಂದ ಪಂಚಾಯತಿಯವರು ಅಭಿವೃದ್ದಿಪಡಿಸಿ ರಸ್ತೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ನಿಪಿ-6 ರಿಂದ 15 ಫೋಟೋಗಳನ್ನು ನಾನೇ ತೆಗೆಸಿರುತ್ತೇನೆ. ನಮ್ಮ ಮನೆಯ ಕಂಪ್ಯೂಟರಿನಲ್ಲಿ ನಾನೇ ಸಿಡಿ ಮಾಡಿರುತ್ತೇನೆ. ನಾನು ದಾವೆಯ ಸಲುವಾಗಿ ಫೋಟೋ ತೆಗೆದಿರುತ್ತೇನೆ ಎಂದರೆ ಸರಿ. ನಿಪಿ-6 ಮತ್ತು 7 ರಲ್ಲಿ ಸಿದ್ದಪ್ಪಾ ನಿರ್ವಾಣೆಪ್ಪಾ ಜಾಬಗೌಡರ ಮತ್ತು

ಅಡಿವೆಪ್ಪಾ ನಿರ್ವಾಣೆಪ್ಪಾ ಜಾಬಗೌಡರ ಇವರ ಮನೆಗಳಿವೆ. ರಸ್ತೆ ಇಲ್ಲಾ ಅಂತಾ ತೋರಿಸಲು ನಾನು ಸದರಿ ಫೋಟೋಗಳನ್ನು ಹಾಜರುಪಡಿಸಿದ್ದೇನೆ. ನಿಪಿ-9 ರಲ್ಲಿ ಪ್ರತಿವಾದಿ 1 ಮತ್ತು 2 ರವರು ಇರುವುದಿಲ್ಲ. ಸಾಕ್ಷಿ ಮುಂದುವರೆದು ಅವರ ಮಕ್ಕಳು ಇರುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

**ಪಾಟೀ ಸವಾಲುಃ**

3 ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರು ಇರುತ್ತಾರೆ, ಸದರಿಯವರು ಕೈಪಿಯತ್ ಹಾಕದ ಕಾರಣ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

Sd/-
2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ,
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.